

# ಕದವ ತೆರೆದ ಮೇಲೂ ಏನಿಲ್ಲ...

**ಮನೆಯ ಕೋಣೆಯ ಕದವನ್ನು ಮನಸ್ಸು ಮನಸ್ಸುಗಳ ನಡುವಿನ ಕದವಾಗಿ ಕಾಣಿಸುವ ಪ್ರಯತ್ನ ಈ ಕಿರುಚಿತ್ರದಲ್ಲಿದೆ. ಆದರೆ ಮುಚ್ಚಿದ ಕದ ತೆರೆದ ಮೇಲೆ ಕಾಣಿಸುವುದಾದರೂ ಏನು?**

■ ಗೌರಿ

ಮದುವೆಗೂ ಮುಂಚೆ ಇದ್ದ ಪ್ರೇಮದ ರಂಗು ದಾಂಪತ್ಯದ ಬಿಸಿಗೆ ಕರಗಿ ಬಣ್ಣಗೆಡುವುದು, ಗಂಡ ಹೆಂಡತಿ ನಡುವೆ ಅಹಂಕಾರದ ಗೋಡೆ ಎದ್ದುನಿಂತು, ಅವರನ್ನೇ ಬಂಧಿಗಳನ್ನಾಗಿಸುವ ವಿಪರ್ಯಾಸವನ್ನು ಕಾಣಿಸುವ ಪ್ರಯತ್ನ ‘ಕದ’ ಕಿರುಚಿತ್ರದಲ್ಲಿದೆ. ಆದರೆ ಈ ಪ್ರಯತ್ನ ಎಷ್ಟು ಯಶಸ್ವಿಯಾಗಿದೆ? ಈ ಬಗ್ಗೆ ಚರ್ಚಿಸಲು ನಾವು ಈ ಕಿರುಚಿತ್ರದ ಸ್ವರೂಪದ ಕುರಿತು ಗಮನಹರಿಸಬೇಕು.

ಗಂಡ ಹೆಂಡತಿ ಯಾವುದೋ ವಿಷಯಕ್ಕೆ ಜಗಳ ಆಡಿದ್ದಾರೆ. ಪರಸ್ಪರ ತಪ್ಪುಗಳನ್ನು ಹುಡುಕಿ ದ್ವೇಷ ಕಾರಿಕೊಂಡಿದ್ದಾರೆ. ‘ನೀನು ಮದುವೆಗೂ ಮುಂಚಿನ ಹಾಗಿಲ್ಲ ಈಗ’ ಎನ್ನುವುದು ಇಬ್ಬರದ್ದೂ ಆರೋಪ. ಪರಸ್ಪರ ಕೆನ್ನೆಗೂ ಹೊಡೆದುಕೊಂಡಿದ್ದಾರೆ. ಹೆಂಡತಿ ಕೋಪದಿಂದ ರೂಮಿನೊಳಗೆ ಸೇರಿಕೊಂಡು ಬಾಗಿಲು ಹಾಕಿಕೊಂಡಿದ್ದಾಳೆ. ಗಂಡ ಹಾಲಿನಲ್ಲಿ ಕೂತಿದ್ದಾನೆ. ಅವರಿಬ್ಬರ ಮಧ್ಯ ಮುಚ್ಚಿದ ಬಾಗಿಲು.

ಈ ಮುಚ್ಚಿದ ಬಾಗಿಲು ಎಂಬ ಪ್ರತಿಮೆಗೆ ಹಲವು ಅರ್ಥಗಳನ್ನು ಸ್ಫುರಿಸುವ, ಹಲವು ಹೊಳಹುಗಳನ್ನು ಹೊಳೆಯಿಸುವ ಶಕ್ತಿ ಇದೆ. ‘ಕದ’ ಕಿರುಚಿತ್ರದ ಪರಿಕಲ್ಪನೆಯ ಹಿಂದೆಯೂ ಈ ಅರ್ಥಸಾಧ್ಯತೆಗಳನ್ನು ತೆರೆದಿಡುವ ಪ್ರಯತ್ನ ಇರುವುದರ ಸುಳಿವು ಸಿಗುತ್ತದೆ. ಆದರೆ ಆ ಸಾಧ್ಯತೆಗಳು ತೆರೆಯ ಮೇಲೆ ಮುಚ್ಚಿದ ಕದದ ಹಾಗೆಯೇ ಬೆನ್ನುಹಾಕಿಬಿಟ್ಟಿವೆ.

ಯಾವುದೇ ಸೃಜನಶೀಲ ಕಲಾಕೃತಿಯನ್ನು ಕಟ್ಟುವಾಗ, ಏನನ್ನು ಹೇಳುತ್ತೇವೆ (ಅಥವಾ ಕಾಣಿಸುತ್ತೇವೆ) ಮತ್ತು ಹೇಗೆ ಹೇಳುತ್ತೇವೆ ಎರಡೂ ಅಷ್ಟೇ ಮುಖ್ಯವಾದ ಸಂಗತಿಗಳು. ಇದೊಂದು ಬಗೆಯಲ್ಲಿ ಮನೆಯನ್ನು ಕಟ್ಟಿದ ಹಾಗೆ. ಒಂದಾದ ನಂತರ ಒಂದು ಇಟ್ಟಿಗೆಯನ್ನು, ಗೋಡೆಗಳನ್ನು ಕಟ್ಟುತ್ತ ಹೋಗುವ ಹೊತ್ತಿನಲ್ಲಿಯೇ ಒಟ್ಟೂ ಮನೆಯ ಶಿಲ್ಪ ಹೇಗಿರಬೇಕು ಎಂಬ ಚಿತ್ರಣವೂ ಮನಸ್ಸಿನಲ್ಲಿ ಇರಲೇಬೇಕಾಗುತ್ತದೆ. ಇಲ್ಲದಿದ್ದರೆ ಆಕಾರಗೆಡುತ್ತದೆ.



**ಹೆಸರು:** ಕದ (ಕನ್ನಡ)
**ನಿರ್ದೇಶನ:** ಚೇತನ್ ಕೆ.ಸಿ.
**ನಿರ್ಮಾಣ:** ಸತ್ಯ ಪಿಕ್ಚರ್ಸ್
**ಧ್ವನಿ ವಿನ್ಯಾಸ:** ಶಂಕರ್
**ಸಂಕಲನ:** ಮಹೇಶ್ ಆರ್.
**ಛಾಯಾಗ್ರಹಣ:** ವಿಶಾಲ್ ಆತ್ರೇಯ
**ಸಂಗೀತ:** ಸತ್ಯ ರಾಧಾಕೃಷ್ಣ, ಜತಿನ್ ದರ್ಶನ್ ಜಿ.
**ತಾರಾಗಣ:** ಡಾಲಿಂಗ್ ಹರ್ಷ, ಸುವಿನ್ ವಾಲ್ಸನ್

ಈ ಕಿರುಚಿತ್ರದಲ್ಲಿ ಪಾತ್ರಗಳು ಹೇಗೆ ವರ್ತಿಸಬೇಕು, ಪ್ರತಿಕ್ರಿಯಿಸಬೇಕು, ಅವರ ಮುಂದಿನ ನಡೆ ಹೇಗಿರಬೇಕು ಎಂಬುದರ ಮೇಲೆಯೇ ಹೆಚ್ಚು ಗಮನ ಕೊಟ್ಟಿರುವ ನಿರ್ದೇಶಕರಿಗೆ ಒಟ್ಟಾರೆ ಕಿರುಚಿತ್ರ ಏನು ಹೇಳಬೇಕು ಎಂಬುದರ ಕುರಿತು ಸ್ಪಷ್ಟತೆ ಸಿಕ್ಕಿದಂತಿಲ್ಲ. ಹಾಗಾಗಿ ಮೊದಲ ದೃಶ್ಯದಲ್ಲಿ ನೋಡುಗನಿಗೆ ಹೇಳಿದ್ದನ್ನೇ ಮತ್ತೆ ಮತ್ತೆ ಬೇರೆ ಬೇರೆ ರೀತಿಗಳಲ್ಲಿ ತೋರಿಸುತ್ತ ಹೋಗುತ್ತಾರೆ. ಗಂಡ ಹೆಂಡತಿ ಇಬ್ಬರಿಗೂ ಜಗಳವಾಗಿದೆ. ಅವರ ಮನಸ್ಸಲ್ಲಿ ಪರಸ್ಪರರ ಕುರಿತು ದ್ವೇಷಭಾವವಿದೆ ಎನ್ನುವುದನ್ನೇ ಬಾಗಿಲಿಗೆ ಪಟ್ಟಿ ಹೊಡೆಯುವುದು, ಸಿಗರೇಟು ಸೇದಿ ಪರಸ್ಪರರ ಮನಸ್ಸು ಉರಿಸಿಕೊಳ್ಳುವುದು ಹೀಗೆ ಬಗೆಬಗೆಯಲ್ಲಿ ಕಾಣಿಸುತ್ತಾರೆ. ಕೊನೆಗೂ ಈ ಕಿರುಚಿತ್ರ ಹೇಳುವುದು ಅಥವಾ ತೋರಿಸುವುದು ಏನು ಎಂದರೆ ‘ಗಂಡ ಹೆಂಡತಿ ನಡುವೆ ಜಗಳವಾಗಿದೆ’ ಎನ್ನುವುದನ್ನಷ್ಟೇ!

ಒಟ್ಟಾರೆ ಕಿರುಚಿತ್ರ ಏನನ್ನು ಧ್ವನಿಸಬೇಕು, ಬರೀ ಮಾತಲ್ಲಿ ಹೇಳಲಾಗದ ಯಾವ ಸತ್ಯವನ್ನು ಹೊಳೆಯಿಸಬೇಕು ಎಂಬುದರ ಕುರಿತು ನಿರ್ದೇಶಕರಿಗೆ ಸ್ಪಷ್ಟತೆ ಇರದಿರುವುದರಿಂದಲೇ ಈ ಕಿರುಚಿತ್ರದಲ್ಲಿ ಇರುವ ಹಲವು ಸಂಕೇತಗಳು ನಿರ್ಜೀವಗೊಂಡು ಬರೀ ಪರಿಕರಗಳಾಗಿ ಕಾಣಿಸುತ್ತವೆ. ವಾರ್ಡ್‌ರೋಬಿನ ಮೇಲೆ ನೇತಾಡುವ ಮುಖವಾಡ ಅದಕ್ಕೊಂದು ಉದಾಹರಣೆ. ಆ ಇಡೀ ಜಗಳ ಅವರಿಬ್ಬರ ಮನಸಲ್ಲಿ ನಡೆದಿರುವುದು ಎಂಬ ಸಂಗತಿ, ಗಾಳಿಗೆ ಮುಚ್ಚಿದ ಬಾಗಿಲು ತೆರೆದುಕೊಳ್ಳುವುದು – ಈ ಯಾವುದೂ ಕಿರುಚಿತ್ರದ ಒಟ್ಟಾರೆ ಅನುಭವಕ್ಕೆ ಹೆಚ್ಚಿಗೆ ಏನನ್ನೂ ಸೇರಿಸುವುದಿಲ್ಲ. ಪಾತ್ರಗಳ ಭಾವದ ಏರಿಳಿತವನ್ನು ಧ್ವನಿಸುವ ಹಿನ್ನೆಲೆ ಸಂಗೀತ, ಒಡೆದ ಬೆರಳ ಮೂಲಕ ಕಾಲವನ್ನು ಸೂಚಿಸುವ ಛಾಯಾಗ್ರಹಣದ ಜಾಣ್ಮೆ ಎಲ್ಲವೂ ಇಲ್ಲಿ ಹೀಗೆಯೇ ವ್ಯರ್ಥವಾಗಿದೆ.

ಒಂದು ರೀತಿಯಲ್ಲಿ ಗರ್ಭಗುಡಿಯಲ್ಲಿ ದೇವರಿಲ್ಲದ, ‘ಕದ ಮುರಿದ’ ಹಳೆಯ ದೇವಾಲಯದ ಹಾಗೇ ಈ ಕಿರುಚಿತ್ರ ಕಾಣಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3694n1K ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.